159ನೇ 6

(01)

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ' ಸೋಜಾ ಇವರು ನಿಯಮ 72 ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ :**

"ಕರಾವಳಿ ಭಾಗದಲ್ಲಿ ಉಚ್ಚ ನ್ಯಾಯಾಲಯ ಸಂಚಾರಿ ಪೀಠವನ್ನು ಸ್ಥಾಪಿಸಲು ಸರ್ಕಾರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಪತ್ರ ಬರೆದರು, ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ"

**ಸರ್ಕಾರದ ಉತ್ತರ :**

"ಭಾರತ ಸಂವಿಧಾನದ ಅನುಚ್ಛೇದ - 214 ರಲ್ಲಿ ಪ್ರತಿ ರಾಜ್ಯಕ್ಕೆ ಒಂದು ಉನ್ನತ ನ್ಯಾಯಾಲಯ ಇರಬೇಕೆಂದು ಆಸ್ಪದವನ್ನು ಕಲ್ಪಿಸಲಾಗಿದೆ.

ರಾಜ್ಯದ ಪುನರ್ ವಿಂಗಡನಾ ಕಾಯ್ದೆ 1956 (The State Re-organisation Act. 1956)ರ ಕಲಂ 51(3)ರನ್ವಯ ಆಯಾ ರಾಜ್ಯಗಳ ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳು ಮಾನ್ಯ ರಾಜ್ಯಪಾಲರ ಅನುಮೋದನೆಯೊಂದಿಗೆ ರಾಜ್ಯದ ಇತರೆ ಯಾವುದೇ ಸ್ಥಳದಲ್ಲಿ ಸಂಚಾರಿ ಪೀಠವನ್ನು ವ್ಯವಸ್ಥೆಗೊಳಿಸಲು (sittings) ಅಧಿಕಾರ ಹೊಂದಿರುತ್ತಾರೆ. ಅದರಂತೆ, ರಾಜ್ಯ ಉಚ್ಚ ನ್ಯಾಯಾಲಯದ ದಿನಾಂಕ: 19.10.2004ರ ಅಧಿಸೂಚನೆಯನ್ವಯ ರಾಜ್ಯದ ಧಾರವಾಡ ಹಾಗೂ ಗುಲ್ಬರ್ಗಾ (ಕಲಬುರಗಿ) ದಲ್ಲಿ ಉಚ್ಚ ನ್ಯಾಯಾಲಯದ ಸಂಚಾರಿ/ವಿಭಾಗೀಯ ಪೀಠಗಳು ಸ್ಥಾಪನೆಗೊಳ್ಳಲು ಅಧಿಸೂಚಿಸಲ್ಪಟ್ಟು ಆರಂಭಗೊಂಡಿರುತ್ತವೆ.

ತದನಂತರ, ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ:23.08.2013 ರ ಅಧಿಸೂಚನೆಗಳಲ್ಲಿ **ದಿನಾಂಕ: 31.08.2013** ರಿಂದ ಜಾರಿಗೆ ಬರುವಂತೆ ಗುಲ್ಬರ್ಗಾ ಸಂಚಾರಿ ಪೀಠವನ್ನು ಖಾಯಂ ಪೀಠವಾಗಿ ಪರಿವರ್ತಿಸಿ, ಅದನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಗುಲ್ಬರ್ಗ ಪೀಠ" ವೆಂದು ಪದನಾಮೀಕರಿಸಲಾಗಿದೆ ಹಾಗೂ **ದಿನಾಂಕ: 24.08.2013 ರಿಂದ** ಜಾರಿಗೆ ಬರುವಂತೆ ಧಾರವಾಡ ಸಂಚಾರಿ ಪೀಠವನ್ನು ಖಾಯಂ ಪೀಠವಾಗಿ ಪರಿವರ್ತಿಸಿ, ಅದನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠ" ವೆಂದು ಪದನಾಮೀಕರಿಸಲಾಗಿದೆ.

ಕರಾವಳಿ ಭಾಗದಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವನ್ನು ಸ್ಥಾಪಿಸುವಂತೆ ಕೋರಿ ವಿವಿಧ ಸಂಘಟನೆಗಳ ಮತ್ತು ಜನಪ್ರತಿನಿಧಿಗಳಿಂದ ಮನವಿಗಳು ಸ್ವೀಕೃತವಾಗಿದ್ದು, ಸದರಿ ಮನವಿ/ಪತ್ರಗಳನ್ನು ಸರ್ಕಾರದ ಪತ್ರ ಸಂಖ್ಯೆ: DPAR 49 SHC 2025 ದಿನಾಂಕ:29.07.2025, 08.12.2025 ಮತ್ತು 20.06.2026 ರ ಪತ್ರಗಳಲ್ಲಿ ನಿಯಮಾನುಸಾರ ಪರಿಶೀಲಿಸಿ, ಕ್ರಮ ಕೈಗೊಳ್ಳುವಂತೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಗೆ ತಿಳಿಸಲು ಕ್ರಮವಹಿಸಲಾಗಿದೆ.

ಕರಾವಳಿ ಜಿಲ್ಲೆಗಳ ಸಾರ್ವಜನಿಕರ ವ್ಯಾಜ್ಯಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿನ ಪ್ರಧಾನ ಪೀಠದಲ್ಲಿ ನಿರ್ವಹಿಸಲಾಗುತ್ತಿದೆ. ಕರಾವಳಿ ಭಾಗದಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವನ್ನು ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿರುತ್ತದೆ

**DPAR/51/SHC/2026**

**(ಡಿ.ಕೆ. ಶಿವಕುಮಾರ್)**
ಮುಖ್ಯಮಂತ್ರಿ